# ‘ಶ್ರೀರಾಮಕೃಷ್ಣ ವಚನವೇದ’ ಭಾವಧಾರೆ - 10

ಸ್ವಾಮಿ ನಿತ್ಯಸ್ಥಾನಂದ

## ಅಧ್ಯಾಯ ೩
## ಭಕ್ತರೊಡನೆ

ದೋಲ ಯಾತ್ರೆಯ ದಿನ ಪರಮಹಂಸರು ಶ್ರೇಷ್ಠ ಭಕ್ತನಾದ ಬಲರಾಮ ಬೋಸನ ಮನೆಗೆ ಬಂದಿದ್ದಾರೆ. ಅವರು ಭಕ್ತರೊಡನೆ ಹರಿನಾಮ ಸಂಕೀರ್ತನೆ ಮಾಡುತ್ತ ಪ್ರೇಮೋನ್ಮತ್ತರಾಗಿದ್ದಾರೆ. ಕೆಲವು ಭಕ್ತರಿಗೂ ಭಾವಾವಸ್ಥೆ ಉಂಟಾಗಿಬಿಟ್ಟಿದೆ. ನಿತ್ಯಗೋಪಾಲನ ಎದೆ ಕೆಂಪೇರಿದೆ. ರಾಖಾಲನು (ಸ್ವಾಮಿ ಬ್ರಹ್ಮಾನಂದರು) ಭಾವಾವಸ್ಥೆಯಲ್ಲಿ ಸಂಪೂರ್ಣ ಬಾಹ್ಯಜ್ಞಾನ ಶೂನ್ಯನಾಗಿ ನೆಲದ ಮೇಲೆ ಬಿದ್ದಿದ್ದಾನೆ. ಪರಮಹಂಸರು ಆತನ ಎದೆಯ ಮೇಲೆ ಕೈಯಿಟ್ಟು ‘‘ಶಾಂತನಾಗು, ಶಾಂತನಾಗು’’ ಎಂದು ಹೇಳುತ್ತಿದ್ದಾರೆ. ಇದೇ ರಾಖಾಲನ ಪ್ರಥಮ ಭಾವಾವಸ್ಥೆ. ನಿತ್ಯಗೋಪಾಲನು ತುಂಬ ಮುಂದುವರಿದ ಆಧ್ಯಾತ್ಮಿಕ ಸಾಧಕ. ಅವನು ಮುಂದೆ ಜ್ಞಾನಾನಂದ ಅವಧೂತ ಎಂದು ಪ್ರಸಿದ್ಧನಾಗುತ್ತಾನೆ. ಮಹಾನಿರ್ವಾಣ ಮಠ ಹಾಗೂ ಕೈವಲ್ಯ ಮಠ ಇವುಗಳನ್ನು ಸ್ಥಾಪಿಸುತ್ತಾನೆ. ಅಷ್ಟೇ ಅಲ್ಲದೆ ಇಪ್ಪತ್ತೈದು ಗ್ರಂಥಗಳನ್ನು ರಚಿಸಿರುವನಂತೆ.

ಸಂಕೀರ್ತನೆಯ ನಂತರ ಎಲ್ಲರೂ ಊಟಕ್ಕೆ ಕುಳಿತುಕೊಂಡಿದ್ದಾರೆ. ಬಲರಾಮನು ದೊಡ್ಡ ಶ್ರೀಮಂತನಾದರೂ, ತಾನು ಮನೆಯ ಯಜಮಾನ ಎಂಬುದೇ ಯಾರಿಗೂ ತಿಳಿಯದ ರೀತಿಯಲ್ಲಿ ಭೃತ್ಯನ ಹಾಗೆ ಕೈಕಟ್ಟಿ ನಿಂತಿದ್ದಾನೆ. ಆತನು ನಮ್ರತೆಯ ಒಂದು ದೊಡ್ಡ ಪಾಠ. ಹೆಮ್ಮೆಪಡುವುದಕ್ಕಾದರೂ ಏನಿದೆ? ಒಂದು ಆಂಗ್ಲ ಗ್ರಂಥದಲ್ಲಿ ಈ ಕೆಳಗಿನ ವಿಷಯವನ್ನು ಓದಿದ್ದೆ: ‘‘ಹುಟ್ಟು ಬೇರೆಯವರಿಂದ ಬಂದಿರುವುದು, ಹೆಸರು ಬೇರೆಯವರು ಕೊಟ್ಟಿರುವುದು, ಶಿಕ್ಷಣವನ್ನು ಬೇರೆಯವರಿಂದ ಪಡೆದಿರುವುದು, ಗೌರವ ಬೇರೆಯವರು ಕೊಡುವುದು, ವರಮಾನವೂ ಬೇರೆಯವರಿಂದ ಬರುವುದು; ಸತ್ತ ಮೇಲೆ ನಿಮ್ಮ ಸಂಪತ್ತು ಬೇರೆಯವರಿಗೆ ಹೋಗುತ್ತದೆ. ನಿಮ್ಮ ಅಂತ್ಯಕ್ರಿಯೆ ಮಾಡುವವರೂ ಬೇರೆಯವರೇ. ಮೊದಲು ಕೊನೆಗಳೆರಡೂ ಬೇರೆಯವರಿಂದಲೇ ಆಗುವುದು. (ಕೇವಲ ಸಾವು ಮಾತ್ರ ನಮ್ಮದು!) ಹೀಗಿದ್ದರೂ ಮನುಷ್ಯನಿಗೇಕೆ ಇಷ್ಟೊಂದು ಹೆಮ್ಮೆ!’’

ಪರಮಹಂಸರು ಜಗನ್ಮಾತೆಯೊಡನೆ ಮಾತನಾಡುತ್ತಿದ್ದಾರೆ: ‘‘ಎಲ್ಲರೂ ಹೇಳುತ್ತಾರೆ, ತಮ್ಮ ಗಡಿಯಾರ ಸರಿಯಾಗಿ ನಡೆಯುತ್ತದೆ ಎಂಬುದಾಗಿ. ಕ್ರಿಶ್ಚಿಯನ್, ಬ್ರಾಹ್ಮೋ, ಹಿಂದೂ, ಮುಸಲ್ಮಾನ ಎಲ್ಲರೂ ಹೇಳುತ್ತಾರೆ, ತಮ್ಮ ಧರ್ಮ ಸರಿ ಎಂಬುದಾಗಿ. ಆದರೆ ತಾಯಿ, ಯಾರ ಗಡಿಯಾರವೂ ಸರಿಯಾಗಿ ನಡೆಯುತ್ತಿಲ್ಲ.’’

ಯಾವ ಗಡಿಯಾರ ಸರಿಯಾಗಿ ನಡೆಯದಿದ್ದರೂ ಗಡಿಯಾರ ಎಲ್ಲರಿಗೂ ಆವಶ್ಯಕ. ಹಾಗೆಯೇ ಧರ್ಮವೂ ಕೂಡ. ಅದರಲ್ಲಿ ಎಷ್ಟೇ ದೋಷವಿದ್ದರೂ ಇದು ಮನುಷ್ಯನಿಗೆ ಆವಶ್ಯಕ. ಸ್ವಾಮಿ ವಿವೇಕಾನಂದರು ಹೇಳುವಂತೆ, ಧರ್ಮವು ಚೆನ್ನಾಗಿ ಹಾಲು ಕರೆಯುವ ಹಸುವಿದ್ದಂತೆ. ಅದು ಒದೆಯಬಹುದು, ಆದರೆ ಹಾಲಿಗಾಗಿ ಆ ಒದೆತವನ್ನು ಸಹಿಸಿಕೊಳ್ಳಬೇಕು. ಧರ್ಮದಲ್ಲಿ ಅನೇಕ ದೋಷಗಳಿರಬಹುದು, ಅನೇಕ ಮೂಢನಂಬಿಕೆಗಳಿರಬಹುದು, ಅದಕ್ಕೆ ಸಂಬಂಧಿಸಿದಂತೆ ಅನೇಕ ಕೋಮುಗಲಭೆಗಳಾಗಿರಬಹುದು, ರಕ್ತಪಾತಗಳಾಗಿರಬಹುದು. ಆದರೂ ಮನುಷ್ಯ ಧರ್ಮವನ್ನು ಬಿಟ್ಟಿರಲಾರ. ಏಕೆಂದರೆ ಅದು ಅವನ ಸ್ವಾಭಾವಿಕ ಆವಶ್ಯಕತೆ (constitutional necessity). ಮಹಾಭಾರತದ ಒಂದು ಶ್ಲೋಕ ನೆನಪಿಗೆ ಬರುತ್ತದೆ:

ಏಕವರ್ಣಂ ಯಥಾ ದುಗ್ಧಂ ಭಿನ್ನವರ್ಣಾಸು ಧೇನುಷು ।
ತಥೈವ ಧರ್ಮವೈಚಿತ್ರ್ಯಂ ತತ್ತ್ವಮೇಕಂ ಪರಂ ಸ್ಮೃತಮ್ ॥

‘ಅನೇಕ ಬಣ್ಣದ ಹಸುಗಳಿದ್ದರೂ ಹಾಲು ಮಾತ್ರ ಒಂದೇ ಬಣ್ಣ. ಹಾಗೆಯೇ ಅನೇಕ ಬಗೆಯ ಧರ್ಮಗಳಿದ್ದರೂ ಪರತತ್ತ್ವ ಮಾತ್ರ ಒಂದೇ.’

ಈ ಏಕತೆಯ ದೃಷ್ಟಿಯಿದ್ದರೆ, ಆಧ್ಯಾತ್ಮಿಕ ದೃಷ್ಟಿ ಇದ್ದರೆ ಧಾರ್ಮಿಕ ಕಲಹ ಇರುವುದಿಲ್ಲ. ಶ್ರೀರಾಮಕೃಷ್ಣರು ಮುಂದೆ ಇದನ್ನೇ ಹೇಳುತ್ತಾರೆ:

‘‘ತಾಯಿ! ನಿನ್ನನ್ನು ಸರಿಯಾಗಿ ಯಾರು ತಾನೇ ಅರಿಯಬಲ್ಲರು? ಆದರೆ ವ್ಯಾಕುಲತೆಯಿಂದ ನಿನ್ನನ್ನು ಕರೆದರೆ ನೀನೂ ಕೃಪೆ ಮಾಡುವುದಾದರೆ, ಎಲ್ಲ ಧರ್ಮಗಳಿಂದಲೂ ನಿನ್ನನ್ನು ಮುಟ್ಟಬಹುದು.’’

ಆ ವ್ಯಾಕುಲತೆ ಉಂಟಾಗುವುದೇ ಭಗವಂತನ ಕೃಪೆಯಿಂದ. ನಮ್ಮಲ್ಲಿ ವ್ಯಾಕುಲತೆ, ಆ ಭಗವದಾಕರ್ಷಣೆ ಉಂಟಾದರೆ ಅದೇ

ಭಗವಂತನ ಕೃಪೆ. ಭಗವಂತನು ಯಾರ ಮೇಲೆ ಅನುಗ್ರಹಿಸು ತ್ತಾನೊ ಅವರ ಹೃದಯದಲ್ಲಿ ಭಕ್ತಿಯ ರೂಪದಲ್ಲಿ ವ್ಯಕ್ತನಾಗಿ ಅವರನ್ನು ತನ್ನೆಡೆಗೆ ಆಕರ್ಷಿಸುತ್ತಾನೆಂದು ಭಕ್ತಿಶಾಸ್ತ್ರದಲ್ಲಿ ಹೇಳಿದೆ. ಮಧುಸೂದನ ಸರಸ್ವತಿಗಳು ಹೇಳುತ್ತಾರೆ:

**ಭಗವಾನ್ ಪರಮಾನಂದಸ್ವರೂಪಃ ಸ್ವಯಮೇವ ಹಿ ।**
**ಮನೋಗತಸ್ತದಾಕಾರ ರಸತಾಮೇತಿ ಪುಷ್ಕಲಾಮ್ ॥**

'ಪರಮಾನಂದ ಸ್ವರೂಪನಾದ ಭಗವಂತನೇ ಭಕ್ತನ ಮನಸ್ಸಿನಲ್ಲಿ ಸೇರಿಕೊಂಡು ತೀವ್ರ ಭಕ್ತಿರಸದ ರೂಪದಲ್ಲಿ ವ್ಯಕ್ತನಾಗುತ್ತಾನೆ.'

ಶ್ರೀರಾಮಕೃಷ್ಣರು ಮಾತು ಮುಂದುವರೆಸುತ್ತ ಹೇಳುತ್ತಾರೆ. ''ತಾಯೆ! ಕ್ರಿಶ್ಚಿಯನ್ನರು ನಿನ್ನನ್ನು ಚರ್ಚಿನಲ್ಲಿ ಹೇಗೆ ಕರೆಯುತ್ತಾರೆ ಎಂಬುದನ್ನು ಒಮ್ಮೆ ನನಗೆ ತೋರಿಸು. ಆದರೆ ತಾಯೆ, ಒಳಕ್ಕೆ ಹೋದರೆ ಜನರು ಏನೆಂದುಕೊಳ್ಳುತ್ತಾರೊ? ಒಂದು ಪಕ್ಷ ಅವರು ಇಲ್ಲದ ಸಲ್ಲದ ಗೊಂದಲ ಎಬ್ಬಿಸಿಬಿಟ್ಟರೆ!! ಕಾಳೀ ದೇವಾಲಯಕ್ಕೆ ಬಿಡದೆ ಹೋಗಿಬಿಟ್ಟರೆ! ಆದ್ದರಿಂದ ಚರ್ಚಿನ ಬಾಗಿಲ ಹಂತದಿಂದಲೇ ಅವರ ಪೂಜೆಯನ್ನು ನನಗೆ ತೋರಿಸಿಬಿಡು.'' ಈ ಮಾತನ್ನು ಕೇಳಿದಾಗ ಒಂದು ಹಾಸ್ಯ ಪ್ರಸಂಗ ಮನಸ್ಸಿಗೆ ಬರುತ್ತದೆ. ಅಮೇರಿಕದಲ್ಲಿ ಬಿಳಿಯರಿಗೆ ಹಾಗೂ ಕರಿಯರಿಗೆ ಬೇರೆ ಬೇರೆ ಚರ್ಚು ಮೀಸಲಾಗಿರುತ್ತವೆ. ಬಿಳಿಯರ ಚರ್ಚಿಗೆ ಕರಿಯರು ಹೋಗುವಂತಿಲ್ಲ, ಕರಿಯರ ಚರ್ಚಿಗೆ ಬಿಳಿಯರು ಹೋಗುವುದಿಲ್ಲ (ಭಾರತದಲ್ಲಿರುವಂತೆಯೇ). ಒಮ್ಮೆ ಕರಿಯನೊಬ್ಬನು ಹಳ್ಳಿಯಿಂದ ಸಾಮಾನು ಕೊಂಡುಕೊಳ್ಳಲು ಪೇಟೆಗೆ ಬಂದಿದ್ದ. ಈಗ ಸಂಜೆಯ ವೇಳೆ. ಅವನು ತುಂಬ ಭಕ್ತನಾದುದರಿಂದ ಸಂಜೆಯ ಹೊತ್ತು ಚರ್ಚಿಗೆ ಹೋಗಿ ಪ್ರಾರ್ಥನೆ ಸಲ್ಲಿಸುವುದು ರೂಢಿಯಾಗಿತ್ತು. ಹತ್ತಿರದಲ್ಲಿದ್ದ ಒಂದು ಚರ್ಚಿಗೆ ಹೋದನು. ಅಲ್ಲಿದ್ದ ಪಾದ್ರಿಯು ಅವನನ್ನು ಕರೆದು ಹೇಳಿದ, ''ಇದು ಬಿಳಿಯರ ಚರ್ಚು, ನೀನು ಹೋಗುವಂತಿಲ್ಲ,'' ಎಂದು. ಕರಿಯನು ಅತ್ಯಂತ ಕಳಕಳಿಯಿಂದ ಅನುಮತಿಗಾಗಿ ಕೇಳಿಕೊಂಡಾಗ, ಪಾದ್ರಿ ಉಪಾಯವಾಗಿ ಹೇಳಿದ: ''ನೋಡಪ್ಪ, ನೀನು ಚರ್ಚಿನ ಮುಂದೆ ನಿಂತು ಜೀಸಸ್‌ನನ್ನು ಕೇಳು 'ನಾನು ಒಳಗೆ ಬರಬಹುದೆ?' ಎಂದು. ಅವನು 'ಆಯಿತು' ಎಂದರೆ ನೀನು ಒಳಗೆ ಹೋಗಬಹುದು. ನನ್ನದಾವ ಅಭ್ಯಂತರವೂ ಇಲ್ಲ.'' ಕರಿಯ ಬುದ್ಧಿವಂತ. ಚರ್ಚಿನ ಬಾಗಿಲಲ್ಲಿ ಕೈ ಮುಗಿದು ಸ್ವಲ್ಪ ಹೊತ್ತು ನಿಂತು ಅನಂತರ ಹೊರಗೆ ಹೊರಟನು. ಪಾದ್ರಿ ಆತನನ್ನು ಕರೆದು ಕೇಳಿದ, ''ಜೀಸಸ್ ಏನು ಹೇಳಿದ?'' ಎಂದು. ಕರಿಯನ ಉತ್ತರ: ''ಜೀಸಸ್ ಹೇಳಿದ, 'ನಾನೇ ಇದುವರೆಗೆ ಚರ್ಚಿಗೆ ಹೋಗಿಲ್ಲ. ನೀನೇನೂ ಚಿಂತಿಸಬೇಕಾಗಿಲ್ಲ, ಹೊರಟು ಹೋಗು' ಎಂದು.''

ಇನ್ನೊಂದು ಸಂದರ್ಭ. ಪರಮಹಂಸರು ಹೇಳುತ್ತಾರೆ: ''ಭಜನಾನಂದವೇ, ಬ್ರಹ್ಮಾನಂದವೇ ನಿಜವಾದ ಸುರೆ, ಪ್ರೇಮದ ಸುರೆ. ಮಾನವ ಜೀವನದ ಉದ್ದೇಶ ಭಗವಂತನಲ್ಲಿ ಪ್ರೇಮ ಬೆಳೆಸಿಕೊಳ್ಳುವುದೇ, ಆತನನ್ನು ಪ್ರೀತಿಸುವುದೇ. ಭಕ್ತಿಯೇ ಮುಖ್ಯ. ಜ್ಞಾನ, ವಿಚಾರ ಇವುಗಳಿಂದ ಅವನನ್ನು ಅರಿಯುವುದೆಂದರೆ ಬಹಳ ಕಠಿಣ.'' ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾನೆ:

**ಕ್ಲೇಶೋಽಧಿಕತರಸ್ತೇಷಾಮವ್ಯಕ್ತಾಸಕ್ತಚೇತಸಾಮ್ ।**
**ಅವ್ಯಕ್ತಾ ಹಿ ಗತಿರ್ದುಃಖಂ ದೇಹವದ್ಭಿರವಾಪ್ಯತೇ ॥** *(೧೨.೫)*

''ಅವ್ಯಕ್ತ ಸತ್ಯದಲ್ಲಿ (ನಿರ್ಗುಣ-ನಿರಾಕಾರ) ಆಸಕ್ತಿಯುಳ್ಳವರಿಗೆ ಕ್ಲೇಶವು ಅಧಿಕ. ದೇಹಧಾರಿಗಳಿಗೆ ಅವ್ಯಕ್ತಸತ್ಯವನ್ನು ಪಡೆಯುವ ಮಾರ್ಗ ತುಂಬ ಕಠಿಣವಾದುದು.'' ಒಮ್ಮೆಲೆ ಅವ್ಯಕ್ತ ಸತ್ಯವನ್ನು ಗ್ರಹಿಸಲಾಗುವುದಿಲ್ಲ. ಪ್ರಾರಂಭದಲ್ಲಿ ನಾಮ-ರೂಪಗಳನ್ನು ಆಧಾರವಾಗಿಟ್ಟುಕೊಂಡು ಸಾಧನೆ ಮಾಡುತ್ತ, ಸ್ಥೂಲದಿಂದ ಸೂಕ್ಷ್ಮಕ್ಕೆ, ಸೂಕ್ಷ್ಮದಿಂದ ಸೂಕ್ಷ್ಮಾತಿಸೂಕ್ಷ್ಮಕ್ಕೆ, ಕೊನೆಯಲ್ಲಿ ಸೂಕ್ಷ್ಮಾತೀತಕ್ಕೆ ತಲುಪಬೇಕು. ಅದಕ್ಕಾಗಿಯೇ ವೇದಾಂತದಲ್ಲಿ ಮೊದಲು ಸಗುಣೋಪಾಸನೆಯನ್ನು ಹೇಳಿರುವುದು. ಶ್ರೀರಾಮಕೃಷ್ಣರು ಒಂದು ಉದಾಹರಣೆಯ ಮೂಲಕ ವಿವರಿಸುತ್ತಾರೆ: ''ಬಿಲ್ಲು ವಿದ್ಯೆ ಕಲಿಯುವವನು ಮೊದಲು ದೊಡ್ಡ ವಸ್ತುವಿಗೆ ಗುರಿಯಿಡುತ್ತಾನೆ. ಅನಂತರ ಹಂತಹಂತವಾಗಿ ಚಿಕ್ಕ ಚಿಕ್ಕ ವಸ್ತುಗಳಿಗೆ ಗುರಿಯಿಡುತ್ತಾನೆ – ಮೊದಲು ವೃಕ್ಷ, ಅನಂತರ ಕೊಂಬೆ, ಮುಂದೆ ಹಕ್ಕಿ, ಕೊನೆಯಲ್ಲಿ ಹಕ್ಕಿಯ ಕಣ್ಣು — ಹೀಗೆ. ಆಲೋಚನಾಶಕ್ತಿ ಪ್ರಬಲವಾಗಿರುವವರಿಗೆ ಜ್ಞಾನಮಾರ್ಗ ಯೋಗ್ಯವಾಗುತ್ತದೆ. ಭಾವನಾಶಕ್ತಿ ಪ್ರಬಲವಾಗಿರುವರಿಗೆ ಭಕ್ತಿಮಾರ್ಗ.''

ಭಗವಂತನನ್ನು ಪ್ರೀತಿಸುವುದೇ, ಅವನನ್ನು ಸಾಕ್ಷಾತ್ಕರಿಸಿಕೊಳ್ಳುವುದೇ ಮನುಷ್ಯ ಜೀವನದ ಉದ್ದೇಶ ಎಂದು ಶ್ರೀರಾಮಕೃಷ್ಣರು ಮತ್ತೆ ಮತ್ತೆ ಒತ್ತಿ ಒತ್ತಿ ಹೇಳುತ್ತಾರೆ. ಏಕೆಂದರೆ ಮನುಷ್ಯ ಜನ್ಮದಲ್ಲಿ ಮಾತ್ರ ಇದು ಸಾಧ್ಯವಾಗುವಂತಹದು, ದೇವತೆಗಳಿಗೂ ಅಸಾಧ್ಯ. ದೇವತೆಗಳು ಮನುಷ್ಯರನ್ನು ನೋಡಿ, ಇವರು ದೇವರನ್ನು ಪಡೆಯಬಲ್ಲರು, ಅವನೊಡನೆ ನಲಿಯಬಲ್ಲರು, ಎಂದು ಅಸೂಯೆಪಡುತ್ತಾರಂತೆ. ಈ ಕೆಳಗಿನ ಶ್ಲೋಕವೂ ಈ ಆದರ್ಶವನ್ನೇ ಒತ್ತಿಹೇಳುತ್ತದೆ:

**ಮಹತಾ ಪುಣ್ಯಪಣ್ಯೇನ ಕ್ರೀತೇಯಂ ಕಾಯ ನೌಸ್ತವ ।**
**ಪಾರಂ ದುಃಖೋದಧೇಃ ಗಂತುಂ ತರ ಯಾವನ್ನ ಭಿದ್ಯತೇ ॥**

''ಅತ್ಯಂತ ಮಹತ್ತರವಾದ ಪುಣ್ಯದ ಬೆಲೆ ತೆತ್ತು ಈ ಮನುಷ್ಯ ದೇಹವೆಂಬ ನೌಕೆಯನ್ನು ಕೊಂಡುಕೊಂಡಿದ್ದೀಯೆ — ಈ ದುಃಖಸಾಗರದ ಆಚೆಯ ದಡವನ್ನು ತಲುಪುವುದಕ್ಕಾಗಿ. ಇದು ಮುರಿದುಹೋಗುವುದಕ್ಕೆ ಮುಂಚೆಯೇ ದಾಟಿಬಿಡು.'' ಅದಕ್ಕಾಗಿಯೇ, '**ಇಹ ಚೇದವೇದೀತ್ ಅಥ ಸತ್ಯಮಸ್ತಿ, ನ ಚೇದಿಹಾವೇದೀತ್ ಮಹತೀ ವಿನಷ್ಟಿಃ ।**' – ''ಇಲ್ಲಿಯೇ ಆತ್ಮನನ್ನು ಅರಿತರೆ, ಆಗ ಸಾರ್ಥಕತೆ, ಇಲ್ಲಿ ಅರಿಯದಿದ್ದರೆ ಒಂದು ದೊಡ್ಡ ನಷ್ಟ.''

ಇನ್ನೊಂದು ದಿನ ಶ್ರೀರಾಮಕೃಷ್ಣರು ಕಲ್ಕತ್ತದಲ್ಲಿ ಪ್ರಾಣಕೃಷ್ಣ ಮುಖರ್ಜಿಯ ಮನೆಯಲ್ಲಿ ಭಕ್ತರೊಡನೆ ಮಾತನಾಡುತ್ತಿದ್ದಾರೆ: ''ನೋಡಿ, ಭಗವಂತ ಮತ್ತು ಆತನ ಐಶ್ವರ್ಯ, ಈ ಜಗತ್ತು ಆತನ ಐಶ್ವರ್ಯ. ಜನ ಆತನ ಐಶ್ವರ್ಯಕ್ಕೆ ಮರುಳಾಗೇ ಎಲ್ಲವನ್ನೂ ಮರೆತುಬಿಡುತ್ತಾರೆ. ಐಶ್ವರ್ಯ ಯಾರದೊ ಅವನನ್ನು ಹುಡುಕುವುದಿಲ್ಲ.'' ಈ ಮಾತನ್ನು ಕೇಳಿದಾಗ ಈಶಾವಾಸ್ಯ ಉಪನಿಷತ್ತಿನ ಕೆಳಗಿನ ಮಂತ್ರ ನೆನಪಿಗೆ ಬರುತ್ತದೆ:

**ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿಹಿತಂ ಮುಖಮ್ ।**
**ತತ್ತ್ವಂ ಪೂಷನ್ ಅಪಾವೃಣು ಸತ್ಯಧರ್ಮಾಯ ದೃಷ್ಟಯೇ ॥**

''ಆತ್ಯಂತಿಕ ಸತ್ಯದ ಮುಖವು ಬಂಗಾರದ ಪಾತ್ರೆಯಿಂದ (ಥಳಥಳಿಸುವ ಈ ಜಗತ್ತಿನಿಂದ) ಮುಚ್ಚಲ್ಪಟ್ಟಿದೆ. ಸತ್ಯಧರ್ಮದಲ್ಲಿ ನಿಷ್ಠೆಯುಳ್ಳ ನಾನು ನಿನ್ನ ನಿಜವಾದ ತತ್ತ್ವವನ್ನು ಅರಿಯುವುದಕ್ಕಾಗಿ ಈ ಆವರಣವನ್ನು ಅತ್ತಕಡೆ ಸರಿಸಿಬಿಡು.''

ಐಶ್ವರ್ಯವನ್ನು ಬಯಸುವವರು ಭಗವಂತನನ್ನು ಶ್ರೀಮಂತನೆಂದು ಭಾವಿಸಲು ಇಷ್ಟಪಡುತ್ತಾರೆ. ಬಂಗಾರವನ್ನು ಇಷ್ಟಪಡುವವರು ದೇವರಿಗೆ ಬಂಗಾರದ ಕಿರೀಟ ಅರ್ಪಿಸುತ್ತಾರೆ, ಬಂಗಾರದ ಸಿಂಹಾಸನದ ಮೇಲೆ ಅವನನ್ನು ಕೂರಿಸುತ್ತಾರೆ. ಆದರೆ ಭಗವಂತನು ಕೇಳುವುದು ಇವಾವುದನ್ನೂ ಅಲ್ಲ. ಅವನು ನಮ್ಮಿಂದ ಬಯಸುವುದು ನಮ್ಮ ಮನಸ್ಸನ್ನು, ನಮ್ಮ ಹೃದಯವನ್ನು. ಆದರೆ ಜನರ ಮನಸ್ಸು ಹೃದಯಗಳೆಲ್ಲವೂ ಅವನ ಐಶ್ವರ್ಯದ ಕಡೆಗೇ. ಸೂಫಿ ಸಂತನೊಬ್ಬನಿಗೆ ಒಂದು ದರ್ಶನವಾಗುತ್ತದೆ. ಭಗವಂತನು ಇಡೀ ಜಗತ್ತನ್ನು ಸೃಷ್ಟಿಸಿ, ಸಸ್ಯ ಪ್ರಾಣಿ ಮನುಷ್ಯರನ್ನೆಲ್ಲ ಸೃಷ್ಟಿಸಿ, ಮನುಷ್ಯರ ಮುಂದೆ ಈ ಜಗತ್ತಿನಲ್ಲಿ ಸಿಗಬಹುದಾದ ಸುಖವನ್ನೆಲ್ಲ ತೋರಿಸಿದನು. ಅವರಲ್ಲಿ ಶೇಕಡ ತೊಂಬತ್ತು ಮಂದಿ ಅದನ್ನರಸಿಕೊಂಡು ಹೊರಟುಹೋದರು. ಉಳಿದ ಶೇಕಡ ಹತ್ತು ಜನರ ಮುಂದೆ ಸ್ವರ್ಗ ಸುಖವನ್ನು ಒಡ್ಡಿದನು. ಅವರಲ್ಲಿ ಶೇಕಡ ತೊಂಬತ್ತು ಮಂದಿ ಅದರ ಹಿಂದೆ ಮುನ್ನುಗ್ಗಿ ಹೋದರು. ಉಳಿದ ಶೇಕಡ ಹತ್ತು ಜನರಿಗೆ ನರಕ ಜ್ವಾಲೆಯನ್ನು ತೋರಿಸಿದನು. ಅವರಲ್ಲಿ ಶೇಕಡ ತೊಂಬತ್ತು ಜನರು ಅದಕ್ಕೆ ಹೆದರಿ ಓಡಿಹೋದರು. ಈಗ ಉಳಿದವರು ಕೆಲವೇ ವ್ಯಕ್ತಿಗಳು. ಅವರನ್ನು ಭಗವಂತನು ಕೇಳಿದನು, ''ನಿಮಗೇನು ಬೇಕು?'' ಎಂದು. ಅವರು, ''ನಮಗೇನು ಬೇಕೆಂಬುದು ನಿನಗೇ ಗೊತ್ತು,'' ಎಂದು ತಲೆಬಾಗಿದರು. ಸುಖದ ಹಿಂದೆಯೂ ಓಡದೆ, ಕಷ್ಟಕ್ಕಂಜಿಯೂ ಓಡದೆ ಇರುವ ಕೆಲವರಿಗೆ ಮಾತ್ರ ಭಗವಂತನು ದೊರೆಯುತ್ತಾನೆ.

ಶ್ರೀರಾಮಕೃಷ್ಣರು ಮುಂದುವರಿದು ಹೇಳುತ್ತಾರೆ: ''ಕಾಮ ಕಾಂಚನದ ಸುಖಕ್ಕಾಗಿ ಎಲ್ಲರೂ ಹಾತೊರೆಯುತ್ತಾರೆ. ಆದರೆ ಅದರಲ್ಲಿ ದುಃಖ, ಅಶಾಂತಿ ಇವೇ ಅಧಿಕ.'' ಶ್ರೀರಾಮಕೃಷ್ಣರ ಈ ಮಾತು ಒಂದು ಸಂಸ್ಕೃತ ಶ್ಲೋಕವನ್ನು ನೆನಪಿಸಿಕೊಡುತ್ತದೆ:

**ಸಂತೋಷಾಮೃತತೃಪ್ತಾನಾಂ ಯತ್ಸುಖಂ ಶಾಂತಚೇತಸಾಮ್ ।**
**ಕುತಸ್ತದ್ಧನಲುಬ್ಧಾನಾಮಿತಶ್ಚೇತಶ್ಚ ಧಾವತಾಮ್ ॥**

''ಸಂತೋಷಾಮೃತದಿಂದ ತೃಪ್ತರಾಗಿ ಮನಸ್ಸು ಶಾಂತವಾಗಿರುವವರಿಗೆ ಯಾವ ಸುಖವು ದೊರೆಯುತ್ತದೆಯೋ ಅಂತಹ ಸುಖ ಧನಲೋಭಿಯಾಗಿ ಅತ್ತಿಂದಿತ್ತ ಅಲೆಯುವವನಿಗೆ ಹೇಗೆ ತಾನೇ ಸಿಗುತ್ತದೆ?'' ಒಬ್ಬ ಭಿಕ್ಷುಕನು ಭಿಕ್ಷಾನ್ನದಿಂದ ತೃಪ್ತನಾಗಿ, ಪಾಳುಗುಡಿಯಲ್ಲಿಯೇ ರಾತ್ರಿ ಕಳೆದು, ನದಿಯಲ್ಲಿ ಮಿಂದು ಸಂತೋಷದಿಂದಿದ್ದ. ಒಂದು ದಿನ ಭಿಕ್ಷೆ ಬೇಡುತ್ತಿರುವಾಗ ರಸ್ತೆಯಲ್ಲಿ ಒಂದು ದೊಡ್ಡ ನೋಟಿನ ಕಂತೆ ಅವನಿಗೆ ಸಿಕ್ಕಿತು. ಹೇಗೋ ಯಾರ ಚೀಲದಿಂದಲೇ ಜಾರಿಬಿದ್ದಿತ್ತು. ಭಿಕ್ಷುಕನು ಅದನ್ನು ತೆಗೆದುಕೊಂಡು, ಏಕಾಂತ ಸ್ಥಳದಲ್ಲಿ ಎಣಿಸಿ ನೋಡುತ್ತಾನೆ, ಹತ್ತುಸಾವಿರ ರೂಪಾಯಿಯಿತ್ತು. ಈಗ ಅವನ ಆನಂದಕ್ಕೆ ಎಣೆಯೇ ಇಲ್ಲ. ಮತ್ತೆ ಮತ್ತೆ ಎಣಿಸಿ ನೋಡಿದ. ಹಣವೇನೊ ಸಿಕ್ಕಿತು. ಆದರೆ ಅವನ ಆನಂದ ತಾತ್ಕಾಲಿಕ. ಈಗ ಅದನ್ನು ಎಲ್ಲಿ ಇಟ್ಟುಕೊಳ್ಳುವುದು, ಹೇಗೆ ಜೋಪಾನವಾಗಿ ಇಟ್ಟುಕೊಳ್ಳುವುದು — ಇದೇ ಸಮಸ್ಯೆ. ಬ್ಯಾಂಕಿನಲ್ಲಿ ಇಡೋಣವೆಂದರೆ, ಅವರು ಇದು ಎಲ್ಲಿಂದ ಬಂತು ಎಂದು ವಿಚಾರಿಸುತ್ತಾರೆ. ಸಂತೋಷದಿಂದ ಇದ್ದ ಅವನು ಚಿಂತಾಕ್ರಾಂತನಾದ. ಅಂದು ರಾತ್ರಿ ಪಾಳುಗುಡಿಯಲ್ಲಿ ಮಲಗಿದ್ದಾನೆ. ಈಗ ಹಣವನ್ನು ಹೇಗೆ ಜೋಪಾನವಾಗಿ ಇಟ್ಟುಕೊಳ್ಳುವುದೊಂದೇ ಚಿಂತೆ. ತಲೆದಿಂಬಿನ ಕೆಳಗೆ ಅದನ್ನು ಇಟ್ಟುಕೊಂಡು ಮಲಗಿದ್ದಾನೆ. ನಿದ್ರೆಯೇ ಬರಲೊಲ್ಲದು. ಹೇಗೋ ಮಧ್ಯರಾತ್ರಿಯ ಹೊತ್ತಿಗೆ ನಿದ್ರೆ ಬಂದಾಗ, ಆ 'ತಿರುಕನೊಂದು ಕನಸ ಕಂಡನು'. ಕನಸಿನಲ್ಲಿ ಕಳ್ಳನೊಬ್ಬನು ಬಂದು ದಿಂಬಿನ ಕೆಳಗಿದ್ದ ಹಣವನ್ನು ಅಪಹರಿಸಿಕೊಂಡು ಹೋದನು. ತಕ್ಷಣ ಎಚ್ಚರಗೊಂಡ ಭಿಕ್ಷುಕನು, ''ಕಳ್ಳ, ಕಳ್ಳ! ನನ್ನ ಹಣ ಹೋಯಿತು'' ಎಂದು ಕಿರುಚುತ್ತ ಓಡಿದನು. ಪಕ್ಕದಲ್ಲಿಯೇ ಮಲಗಿಕೊಂಡಿದ್ದ ಕಳ್ಳನೊಬ್ಬನು ಎಚ್ಚರಗೊಂಡು ಭಿಕ್ಷುಕನ ದಿಂಬಿನ ಕೆಳಗೆ ನೋಡುತ್ತಾನೆ, ಭಾರಿ ಮೊತ್ತದ ಹಣ! ಭಿಕ್ಷುಕನು ಹಿಂತಿರುಗಿ ಬಂದು ನೋಡುತ್ತಾನೆ, ಹಣವಿರಲಿಲ್ಲ.

*(ಮುಂದುವರಿಯುವುದು)*

''ಯಾವುದು ನಮ್ಮ ಆಧ್ಯಾತ್ಮಿಕ, ಮಾನಸಿಕ ಮತ್ತು ದೈಹಿಕ ದೌರ್ಬಲ್ಯಕ್ಕೆ ಕಾರಣವೋ ಅದನ್ನು ನೀವು ಕಾಲ ಬೆರಳುಗಳಿಂದಲೂ ಮುಟ್ಟಬೇಡಿ. ಮನುಷ್ಯನ ಅಂತರಂಗದಲ್ಲಿ ಸ್ವಾಭಾವಿಕವಾಗಿ ಹುದುಗಿರುವ ಶಕ್ತಿಯನ್ನು ವ್ಯಕ್ತಗೊಳಿಸುವುದೇ ಧರ್ಮ. ಅನಂತ ಶಕ್ತಿಯ ಸ್ಪ್ರಿಂಗು ಸುರುಳಿ ಸುತ್ತಿಕೊಂಡು ನಮ್ಮ ಪುಟ್ಟ ದೇಹದಲ್ಲಿರುವುದು. ಅದು ಹರಡುತ್ತಿದೆ.. ಇದೇ ಮಾನವನ ಇತಿಹಾಸ, ಅವನ ಧರ್ಮ, ನಾಗರಿಕತೆ ಅಥವಾ ಪ್ರಗತಿ.'' — ಸ್ವಾಮಿ ವಿವೇಕಾನಂದ